2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 154/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪೌಲೋಸ್ ಪಿ ಯು | ಪಿಡಬ್ಲ್ಯೂ-1 |
| ತಂದೆಯ ಹೆಸರು | - | ಉದುಪು | ಸಿಡಬ್ಲ್ಯೂ -3 |
| ವಯಸ್ಸು | - | 68 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಮುತ್ತಿನಕೊಪ್ಪ | |

ದಿನಾಂಕಃ 23.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಆರೋಪಿತರು ಗೊತ್ತು. ಅವರು ನಮ್ಮ ಊರಿನವರು. ಚಾಸಾ.1 ರವರು ಗೊತ್ತು, ಅವರು ನಮ್ಮ ಊರಿನವರು. ಚಾಸಾ.2 ಆರೋಪಿತರ ಮಗಳು. ಚಾಸಾ.4 ರಿಂದ ಚಾಸಾ.12 ರವರು ಗೊತ್ತು, ಅವರು ನಮ್ಮ ಊರಿನವರು.

2. ನಮ್ಮ ಊರಾದ ಮುತ್ತಿನಕೊಪ್ಪದಲ್ಲಿ ಚಾಸಾ.1 ರವರಿಗೆ ಸೇರಿದ ಒಂದು ಕಟ್ಟಡವಿದೆ. ಮೊದಲಿಗೆ ಆರೋಪಿತರು ನಮ್ಮ ಊರಿನಲ್ಲಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುತ್ತಿದ್ದರು. ನಂತರ ಆರೋಪಿತರು ಚಾಸಾ.1 ರವರ ಕಟ್ಟಡವನ್ನು ಬಾಡಿಗೆಗೆ ಪಡೆದುಕೊಂಡು ಅಲ್ಲಿ ಹೋಟೆಲನ್ನು ನಡೆಸುತ್ತಿದ್ದರು.

3. ಈಗ್ಗೆ 5 ವರ್ಷಗಳ ಹಿಂದೆ ಒಂದು ದಿನ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಜನರನ್ನು ಬಸ್ ಗೆ ಬಿಡಲು ಮುತ್ತಿನಕೊಪ್ಪಕ್ಕೆ ಹೋಗಿದ್ದೆನು. ಆಗ ಚಾಸಾ.1 ರವರ ಕಟ್ಟಡದ ಬಳಿ ಜನರು ಸೇರಿದ್ದರು. ನಾನು ಯಾಕೆ ಜನರು ಸೇರಿದ್ದಾರೆ ಎಂದು

ನೋಡಲು ಅಲ್ಲಿಗೆ ಹೋದೆನು. ಸದರಿ ಕಟ್ಟಡದ ಪಕ್ಕದಲ್ಲಿ ಚಾಸಾ.1 ರವರಿಗೆ ಸೇರಿದ ಖಾಲಿ ನಿವೇಶನವಿದೆ. ಅದಕ್ಕೆ ಸೀಮೆಂಟ್ ಕಂಪೌಂಡನ್ನು ಹಾಕಲಾಗಿತ್ತು. ಸದರಿ ನಿವೇಶನದಲ್ಲಿ ಬಿ ಎಸ್ ಎನ್ ಎಲ್ ರವರಿಗೆ ಸೇರಿದ ಒಂದು ಟವರ್ ಇತ್ತು. ಸದರಿ ನಿವೇಶನದ ಕಾಂಪೌಂಡನ್ನು ಚಾಸಾ.1 ರವರು ಮುರಿದು ಹಾಕಿದ್ದರು. ಆ ಕಾಂಪೌಂಡನ್ನು ನೀವು ಮುಟ್ಟುವಂತಿಲ್ಲ, ಅದು ನಮಗೆ ಸೇರಿದ್ದು ಎಂದು ಹೇಳಿ ಆರೋಪಿತರು ಚಾಸಾ.1 ರವರನ್ನು ಕೇಳಿದಾಗ ಅವರ ನಡುವೆ ಮಾತಿಗೆ ಮಾತು ಬೆಳೆದು ಜಗಳವಾಗುತ್ತಿತ್ತು. ಆಗ ಆರೋಪಿತರು ಚಾಸಾ.1 ರವರಿಗೆ ಮತ್ತು ನಿವೇಶನದ ಕಾಂಪೌಂಡನ್ನು ಕೆಡವಲು ಬಂದಿದ್ದ ಕೆಲಸದವರಿಗೆ ಕೆಟ್ಟ ಶಬ್ದಗಳಿಂದ ಅಂದರೆ ಅಪ್ಪಂಗೆ ಹುಟ್ಟಿಲ್ಲ ಎಂದು ಬೈದರು. ನಂತರ ಚಾಸಾ.1 ರವರು ನ.ರಾ.ಪುರ ಪೊಲೀಸರಿಗೆ ಫೋನ್ ಮಾಡಿದರು. ಸದರಿ ಗಲಾಟೆ ನಡೆದಾಗ ಸಮಯ ಸಂಜೆ 6.30 ಗಂಟೆಯಾಗಿತ್ತು. ನಂತರ ನ.ರಾ.ಪುರ ಪೊಲೀಸ್ ಠಾಣೆಯ ಮುಖ್ಯ ಪೇದೆ ಮಂಜುನಾಥ್ ರವರು ಸ್ಥಳಕ್ಕೆ ಬಂದರು.

4. ನಂತರ 1 ನೇ ಆರೋಪಿ ತಮ್ಮ ಹೋಟೆಲ್ ನಲ್ಲಿದ್ದ ತಮ್ಮ ಸುಮಾರು 8 ವರ್ಷದ ಹೆಣ್ಣು ಮಗುವಾದ ಚಾಸಾ.2 ರವರನ್ನು ಆಕೆಯ ಕೈ ಹಿಡಿದು ಹೊರಗೆ ಎಳೆದುಕೊಂಡು ಬಂದು ಹೋಟೆಲ್ ನಲ್ಲಿ ತರಕಾರಿ ಕುಯ್ಯುವ ಚಾಕುವನ್ನು ಆಕೆಯ ಕತ್ತಿಗೆ ಹಿಡಿದು ಮಗುವನ್ನು ಕುಯ್ದು ಬಿಡುತ್ತೇನೆ ಮತ್ತು ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳಿ ಚಾಕುವಿನಿಂದ ತನ್ನ

ಮಗುವಿನ ಕತ್ತನ್ನು ಕುಯ್ದುಳು. ಆಗ ಮಗುವಿನ ಕುತ್ತಿಗೆಗೆ ಗಾಯವಾಗಿ ರಕ್ತ ಬಂತು. ಆಗ ಪೊಲೀಸರು 1 ನೇ ಆರೋಪಿಯ ಕೈಯನ್ನು ಹಿಡಿದುಕೊಂಡರು. 1 ನೇ ಆರೋಪಿ ಸದರಿ ಪೊಲೀಸರನ್ನು ದೂಡಿದಳು. ಆಗ ಆಕೆಯ ಕೈಯಲ್ಲಿದ್ದ ಚಾಕುವಿನಿಂದ ಸದರಿ ಪೊಲೀಸರ ಕೈಬೆರಳುಗಳು ಕುಯ್ದುಕೊಂಡವು ಮತ್ತು ಅವುಗಳಿಂದ ರಕ್ತ ಬಂದಿತು. ನಂತರ ನಾನು 1 ನೇ ಆರೋಪಿಯಿಂದ ಕೈನಿಂದ ಚಾಕುವನ್ನು ಬಿಡಿಸಿಕೊಂಡೆನು.

5. ನಂತರ ಸ್ಥಳೀಯರು ಚಾಸಾ.2 ರವರನ್ನು ನ.ರಾ.ಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ವಿಚಾರಿಸಿದರು. ಆಗ ನಾನು ಅವರಿಗೆ ನನಗೆ ತಿಳಿದಿದ್ದ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ.

6. ಆ ದಿನ 1 ನೇ ಆರೋಪಿ ಚಾಸಾ.2 ರವರ ಕುತ್ತಿಗೆಯನ್ನು ಕುಯ್ದು ಚಾಕುವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಒಂದು ಮರದ ಹಿಡಿ ಇರುವ ಚಾಕುವನ್ನು ನೋಡಿ ಗುರುತಿಸಿ ಅದೇ ಚಾಕುವಿನಿಂದ ಆ ದಿನ 1 ನೇ ಆರೋಪಿ ಚಾಸಾ.2 ರವರ ಕುತ್ತಿಗೆಯನ್ನು ಕುಯ್ದು ಗಾಯಗೊಳಿಸಿದ್ದಾಗಿ ನುಡಿದ ಮೇರೆಗೆ ಸದರಿ ಚಾಕುವನ್ನು ಮು.ಮಾ.1 ಎಂದು ಗುರುತಿಸಲಾಯಿತು.

7. ಕೃತ್ಯ ನಡೆದ ಸ್ಥಳವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಚಾಸಾ.1 ರವರ ಕಟ್ಟಡ ಮತ್ತು ಅದರಪಕ್ಕದಲ್ಲಿದ್ದ ಖಾಲಿ ನಿವೇಶನಕ್ಕೆ ಹಾಕಿದ್ದ

ಕಾಂಪೌಂಡ್ ಗೋಡೆಯನ್ನು ಹೊಡೆದಿರುವುದು ಕಂಡು ಬರುವುದಾಗಿ ತಿಳಿಸಿ ಸದರಿ ಸ್ಥಳದಲ್ಲಿಯೇ ಆ ದಿನ ಕೃತ್ಯ ನಡೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.1 ಎಂದು ಗುರುತಿಸಲಾಯಿತು.

(ಪಾಟೀ ಸವಾಲು: ಆರೋಪಿತರ ಪರ ವಕೀಲರು 1 ನೇ ಆರೋಪಿಗೆ ಇತ್ತೀಚೆಗೆ ಬ್ರೇನ್ ಸರ್ಜರಿ ಆಗಿರುವುದಾಗಿ ತಿಳಿಸಿ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ